SEPTEMBER 09, 2025

AKASHAVANI - DHARWAD

PRADESH SAMACHARA (KANNADA) 7.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು:

- ರಾಜ್ಯಾದ್ಯಂತ, ವಾಡಿಕೆಗಿಂತ ಶೇಕಡ 4 ರಷ್ಟು ಹೆಚ್ಚು ಮಳೆ; ಒಟ್ಟು 5 ಲಕ್ಷ 20 ಸಾವಿರದ 663 ಹೆಕ್ಟರ್ ಪ್ರದೇಶದಲ್ಲಿ, ಬೆಳೆ ಹಾನಿ.
- ಧಾರವಾಡ, ಕಲಬುರ್ಗಿ, ಸೇರಿದಂತೆ, ರಾಜ್ಯದ ಒಟ್ಟು 6 ಕಡೆಗಳಲ್ಲಿ, ಖಾಯಂ ಜನತಾ ನ್ಯಾಯಾಲಯ; ಈ ತಿಂಗಳ 13 ರಂದು, ಲೋಕ ಅದಾಲತ್.
- ಸರಕು ಮತ್ತು ಸೇವಾ ತೆರಿಗೆ ಪರಿಷ್ಕರಣೆ; ಈ ತಿಂಗಳ 22 ರಿಂದ, ಹೊಸ ದರಗಳು, ಜಾರಿಗೆ.
- ಉಪ ರಾಷ್ಟ್ರಪತಿ ಸ್ಥಾನಕ್ಕೆ ಇಂದು, ಚುನಾವಣೆ: ರಾಜ್ಯದ 40 ಸಂಸದರು ಸೇರಿ, ಒಟ್ಟು 781 ಸಂಸದರಿಂದ ಮತದಾನ.

<><><>

ಈಗ ವಾರ್ತೆಗಳ ವಿವರ

<><><>

ರಾಜ್ಯಾದ್ಯಂತ, ವಾಡಿಕೆಗಿಂತ ಶೇಕಡ 4 ರಷ್ಟು ಹೆಚ್ಚು ಮಳೆಯಾಗಿದೆ; ಒಟ್ಟು 5 ಲಕ್ಷದ 20 ಸಾವಿರದ 663 ಹೆಕ್ಟರ್ ಪ್ರದೇಶದಲ್ಲಿ, ಬೆಳೆ ಹಾನಿ ಸಂಭವಿಸಿದೆ; ಮುಂಬರುವ ಹತ್ತು ದಿನಗಳಲ್ಲಿ, ಎಲ್ಲ 31 ಜಿಲ್ಲಾಧಿಕಾರಿಗಳಿಗೆ, ಬೆಳೆ ಹಾನಿ ಸಂಪೂರ್ಣ ಸಮೀಕ್ಷಾ ವರದಿ ಸಲ್ಲಿಸುವಂತೆ ಸೂಚಿಸಿದ್ದಾಗಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ತಿಳಿಸಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲಾಧಿಕಾರಿಗಳು, ಉಪ ವಿಭಾಗಾಧಿಕಾರಿಗಳ ಜೊತೆ ಬೆಂಗಳೂರಿನಲ್ಲಿ, ವಿಡಿಯೋ ಸಂವಾದ ನಡೆಸಿ, ಅವರು ಮಾತನಾಡಿದರು. ಕಲಬುರಗಿ, ಬೀದರ್, ಬಾಗಲಕೋಟೆ, ಗದಗ, ಧಾರವಾಡ, ಬೆಳಗಾವಿ, ಹಾಗೂ ವಿಜಯಪುರ ಜಿಲ್ಲೆಗಳಲ್ಲಿ ಹೆಚ್ಚು ಬೆಳೆ ಹಾನಿಯಾಗಿದೆ. 111 ಜನ ಸಾವನ್ನಪ್ಪಿದ್ದು, ಕುಟುಂಬಸ್ಥರಿಗೆ ಪರಿಹಾರ ನೀಡಲಾಗಿದೆ. 651 ಮನೆಗಳು ಸಂಪೂರ್ಣ ಹಾನಿಯಾಗಿ, 9 ಸಾವಿರದ 87 ಮನೆಗಳಿಗೆ, ಭಾಗಶಃ ಹಾನಿಯಾಗಿದೆ. ಒಟ್ಟು 8 ಸಾವಿರದ 608 ಮನೆಗಳಿಗೆ ಪರಿಹಾರ ಒದಗಿಸಲಾಗಿದೆ. ರಾಜ್ಯದಲ್ಲಿ 766 ಜಾನುವಾರುಗಳು ಸಾವನ್ನಪ್ಪಿದ್ದು, 1 ಕೋಟಿ 52 ಲಕ್ಷ ರೂಪಾಯಿ ಪರಿಹಾರ ನೀಡಲಾಗಿದೆ ಎಂದರು.

<><><>

ಕಿತ್ತೂರು ಕರ್ನಾಟಕದ, ಧಾರವಾಡ ಜಿಲ್ಲೆಯಾದ್ಯಂತ, ಒಟ್ಟು 93 ಸಾವಿರದ 496 ದಶಾಂಶ 9, 8 ಹೆಕ್ಟರ್ ಕೃಷಿ ಭೂಮಿಯಲ್ಲಿ ಬೆಳೆ ಹಾನಿ ಸಂಭವಿಸಿದೆ; ಸೂಕ್ತ ಪರಿಹಾರ ಬಿಡುಗಡೆ ಮಾಡುವಂತೆ, ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ, ಮುಖ್ಯಮಂತ್ರಿ ಅವರೊಂದಿಗಿನ, ವಿಡಿಯೋ ಸಂವಾದದ ವೇಳೆ, ಮನವಿ ಮಾಡಿದರು.

ಜಿಲ್ಲಾಧಿಕಾರಿ ದಿವ್ಯಾ ಪ್ರಭು ಸೇರಿದಂತೆ, ಜಿಲ್ಲಾಡಳಿತದ ಹಿರಿಯ ಅಧಿಕಾರಿಗಳು, ಕಂದಾಯ, ತೋಟಗಾರಿಕೆ ಹಾಗೂ ಕೃಷಿ ಇಲಾಖೆ ಅಧಿಕಾರಿಗಳು, ಸಭೆಯಲ್ಲಿ ಪಾಲ್ಗೊಂಡಿದ್ದರು. ಬೆಳೆ ಹಾನಿ ಸಮೀಕ್ಷೆ ಅಂತಿಮ ವರದಿಯನ್ನು, ಜಾಲತಾಣದಲ್ಲಿ ದಾಖಲಿಸಲಾಗಿದೆ ಎಂದು, ಸಚಿವ ಲಾಡ ತಿಳಿಸಿದರು.

<><><>

ಕಲ್ಯಾಣ ಕರ್ನಾಟಕದ, ಕಲಬುರಗಿ ಜಿಲ್ಲೆಯಲ್ಲಿ, ಸತತ ಮಳೆಯಿಂದ, ಒಟ್ಟು 1 ಲಕ್ಷ 5 ಸಾವಿರದ 967 ಹೆಕ್ಟರ್ ಬೆಳೆ ಹಾನಿಯಾಗಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ, ಮುಖ್ಯಮಂತ್ರಿವರಿಗೆ, ವಿಡಿಯೋ ಸಂವಾದದ ವೇಳೆ, ಮಾಹಿತಿ ನೀಡಿದರು. ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್ ಹಾಗೂ ಜಿಲ್ಲಾಡಳಿತದ ಹಿರಿಯ ಅಧಿಕಾರಿಗಳು, ವರ್ಚುವಲ್ ಸಭೆಯಲ್ಲಿ, ಪಾಲ್ಗೊಂಡಿದ್ದರು.

<><><>

ಧಾರವಾಡ, ಕಲಬುರ್ಗಿ, ಬೆಳಗಾವಿ, ಸೇರಿದಂತೆ, ಒಟ್ಟು 6 ಕಡೆಗಳಲ್ಲಿ, ಖಾಯಂ ಜನತಾ ನ್ಯಾಯಾಲಯಗಳನ್ನು ಸ್ಥಾಪಿಸಲಾಗಿದೆ ಎಂದು, ಹಾಸನ ಜಿಲ್ಲೆ ಪ್ರಧಾನ ನ್ಯಾಯಾಧೀಶರಾದ ಹೇಮಾವತಿ ತಿಳಿಸಿದ್ದಾರೆ. ಹಾಸನದಲ್ಲಿ, ಸುದ್ದಿಗೋಷ್ಠಿ ನಡೆಸಿದ ಅವರು, ರಾಜೀ ಸಂಧಾನದ ಮೂಲಕ, ಕಕ್ಷಿದಾರರು ವ್ಯಾಜ್ಯಗಳನ್ನು ಇತ್ಯರ್ಥ ಪಡಿಸಿಕೊಳ್ಳಲು ಅನುವಾಗುವಂತೆ, ಜನತಾ ನ್ಯಾಯಾಲಯದ ವ್ಯಾಪ್ತಿಗೆ, ಒಟ್ಟು 9 ಸೇವೆಗಳನ್ನು, ನ್ಯಾಯಾಂಗ ಇಲಾಖೆ ತಂದಿದೆ ಎಂದರು. ಪ್ರಕರಣಗಳನ್ನು ಜನತಾ ನ್ಯಾಯಾಲಯದಲ್ಲಿ ಉಚಿತವಾಗಿ ಇತ್ಯರ್ಥಪಡಿಸಲಾಗುತ್ತಿದೆ, 13 ರಂದು ಲೋಕ ಅದಾಲತ ಜರುಗಲಿದೆ ಎಂದರು.

<><><>

ಸರಕು ಮತ್ತು ಸೇವಾ ತೆರಿಗೆಗಳಲ್ಲಿ, ಕೇಂದ್ರ ಜಿ.ಎಸ್.ಟಿ. ಮಂಡಳಿ ಕೈಗೊಂಡಿರುವ, ಎರಡನೇ ಆವೃತ್ತಿಯ ಪರಿಷ್ಕರಣೆ, ಈ ತಿಂಗಳ 22 ರಿಂದ, ದೇಶಾದ್ಯಂತ ಜಾರಿಗೊಳ್ಳಲಿದೆ. ಆರ್ಥಿಕ ವ್ಯವಹಾರಗಳ ತಜ್ಞ, ಮೈಸೂರಿನ ರಂಗಸ್ವಾಮಿ ಮೂಕನಹಳ್ಳಿ, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ರಂಗಸ್ವಾಮಿ ಮೂಕನಹಳ್ಳಿ ಧ್ವನಿ 60 ಸೆಕೆಂದುಗಳು

<><><>

<><><>

ಈಗ ಪ್ರಕಟಣೆ,
ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..
(43 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ X ಖಾತೆ @airnews_Kannada ಹಾಗೂ

ನಮ್ಮ ಫೇಸ್ಬುಕ್ ಖಾತೆ Akashvani RNU Bengaluru-Dharwad ಅನುಸರಿಸಿ.

<><><>

ಉಪ ರಾಷ್ಟ್ರಪತಿ ಜಗದೀಪ ಧನಕರ ಅವರ ರಾಜಿನಾಮೆಯಿಂದ ತೆರವಾದ, ಉಪ ರಾಷ್ಟ್ರಪತಿ ಸ್ಥಾನಕ್ಕೆ, ಇಂದು ಬೆಳಗ್ಗೆ 10 ರಿಂದ, ಸಂಜೆ 5 ಗಂಟೆ ವರೆಗೆ, ಚುನಾವಣೆ ನಡೆಯಲಿದೆ. ಎನ್.ಡಿ.ಎ. ಅಭ್ಯರ್ಥಿಯಾಗಿ, ಮಹಾರಾಷ್ಟ್ರದ ಮಾಜಿ ರಾಜ್ಯಪಾಲ ಸಿ.ಪಿ. ರಾಧಾಕೃಷ್ಣನ್ ಹಾಗೂ ಪ್ರತಿಪಕ್ಷಗಳ ಒಕ್ಕೂಟ – ಐ.ಎನ್.ಡಿ.ಐ.ಎ. ಅಭ್ಯರ್ಥಿಯಾಗಿ, ನಿವೃತ್ತ ನ್ಯಾಯಮೂರ್ತಿ, ಬಿ.ಸುದರ್ಶನ ರೆಡ್ಡಿ ಕಣದಲ್ಲಿದ್ದಾರೆ. ಪ್ರಸ್ತುತ ಸಂಸತ್ತಿನ ಉಭಯ ಸದನಗಳ ಸದಸ್ಯರ ಒಟ್ಟು ಸಂಖ್ಯೆ 781. ಆಡಳಿತಾರೂಢ ಎನ್.ಡಿ.ಎ. ಮೈತ್ರಿಕೂಟದಲ್ಲಿ, 439 ಸಂಸದರು ಹಾಗೂ ಪ್ರತಿಪಕ್ಷಗಳ ಒಕ್ಕೂಟದಲ್ಲಿ, 324 ಜನ ಸದಸ್ಯರಿದ್ದಾರೆ. ಇತರೆ ಪಕ್ಷಗಳ ಸದಸ್ಯರ ಸಂಖ್ಯೆ 18.

<><><>

ಖಾದಿ ಹಾಗೂ ಗ್ರಾಮೋದ್ಯೋಗ ಪರಂಪರೆ ಪುನಃಶ್ಚೇತನಗೊಳಿಸಲು, 10 ಜಿಲ್ಲೆಗಳಲ್ಲಿ ಖಾದಿ ಉತ್ಸವ ಆಯೋಜಿಸಲಾಗುವುದು ಎಂದು, ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷ ಬಸನಗೌಡ ತುರವಿಹಾಳ ತಿಳಿಸಿದ್ದಾರೆ. ಖಾದಿ ಉತ್ಸವ–2025, ಪ್ರದರ್ಶನ ಹಾಗೂ ಮಾರಾಟ ಮೇಳಕ್ಕೆ, ವಿಜಯಪುರದಲ್ಲಿ ಚಾಲನೆ ನೀಡಿ, ಅವರು ಮಾತನಾಡಿದರು. ರಾಜ್ಯದಲ್ಲಿ 175ಕ್ಕೂ ಹೆಚ್ಚು ಸಂಸ್ಥೆಗಳು, ಖಾದಿ ಉತ್ಪಾದನೆಯಲ್ಲಿ ತೊಡಗಿದ್ದು, ಉದ್ಯೋಗ ಸೃಜನೆಗೂ ಸಹಕಾರಿಯಾಗಿವೆ, ಎಂದರು.

<><><>

ಬಾಗಲಕೋಟೆ ಜಿಲ್ಲೆಯ, ಐತಿಹಾಸಿಕ ಬಾದಾಮಿ, ಪಟ್ಟದಕಲ್ಲು ಹಾಗೂ ಐಹೊಳೆಯಲ್ಲಿ ಬರುವ ನವೆಂಬರ್‌ನಲ್ಲಿ, ಚಾಲುಕ್ಯ ಉತ್ಸವ ಆಯೋಜಿಸಲಾಗಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ, ಆರ್.ಬಿ ತಿಮ್ಮಾಪೂರ ತಿಳಿಸಿದ್ದಾರೆ. ಜಿಲ್ಲಾಧಿಕಾರಿ ಕಚೇರಿಯಲ್ಲಿ ಜರುಗಿದ ಪೂರ್ವಭಾವಿ ಸಿದ್ಧತಾ ಸಭೆಯಲ್ಲಿ ಮಾತನಾಡಿದ ಅವರು, ಒಟ್ಟು ಮೂರು ದಿನಗಳ ಕಾಲ ಉತ್ಸವ ನಡೆಯಲಿದೆ. ಉತ್ಸವಕ್ಕೆ 2 ಕೋಟಿ ರೂಪಾಯಿ ಅನುದಾನ ಮೀಸಲಿಡಲಾಗಿದೆ. ಚಾಲುಕ್ಯರ ನಾಡಿನ, ಐತಿಹಾಸಿಕ ಹಾಗೂ ಸಾಂಸ್ಕೃತಿಕ ಪರಂಪರೆ ಬಿಂಬಿಸಲು, ಯೋಜಿಸಲಾಗಿದೆ, ಎಂದರು.

<><><>

ಬಾಗಲಕೋಟೆಯ, ಜವಾಹರ ನವೋದಯ ವಿದ್ಯಾಲಯದ, 8ನೇ ತರಗತಿ ವಿದ್ಯಾರ್ಥಿನಿ, ಸಾಹಿತ್ಯಾ ನಾಗೇಶ ಗೋಲಶೆಟ್ಟಿ, ಉತ್ತರ ಪ್ರದೇಶದ ಲಕ್ನೋದಲ್ಲಿ ಇತ್ತೀಚೆಗೆ ಜರುಗಿದ, ಪ್ರೌಢ ಶಾಲೆಗಳ ರಾಷ್ಟ್ರೀಯ ಕ್ರೀಡಾಕೂಟದಲ್ಲಿ, 400 ಮೀಟರ್ ಓಟದ ಸ್ಪರ್ಧೆಯಲ್ಲಿ, ಬಂಗಾರದ ಪದಕ ಗಳಿಸಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ ಸಾಹಿತ್ಯಾ ತಮ್ಮ ಅನಿಸಿಕೆ ಹಂಚಿಕೊಂಡಿದ್ದು ಹೀಗೆ..

<><><>

ಸಾಹಿತ್ಯಾ ಗೋಲಶೆಟ್ಟಿ ಧ್ವನಿ 43 ಸೆಕೆಂದುಗಳು

<><><>

ಪ್ರಧಾನಮಂತ್ರಿ ನಿಕ್ಷಯ್ ಪೋಷಣ್ ಅಭಿಯಾನ ಹಾಗೂ ನಿಕ್ಷಯ ಮಿತ್ರ ಕಾರ್ಯಕ್ರಮದಡಿ, ಕ್ಷಯ ರೋಗಿಗಳಿಗೆ, ಪೌಷ್ಟಿಕ ಆಹಾರ ವಿತರಣೆ, ಇಂದು ಬೆಳಗ್ಗೆ 11 ಗಂಟೆಗೆ, ಧಾರವಾಡ ಜಿಲ್ಲೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಭಾಂಗಣದಲ್ಲಿ, ಜರುಗಲಿದೆ. ಜಿಲ್ಲಾಧಿಕಾರಿ ದಿವ್ಯಾ ಪ್ರಭು ಪಾಲ್ಗೊಂಡು, ರಾಷ್ಟ್ರೀಯ ಹೆಪಟೈಟಿಸ್ ನಿರ್ಮೂಲನಾ ದಿನಾಚರಣೆಗೆ ಸಹ ಚಾಲನೆ ನೀಡಲಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

ರಾಜ್ಯಾದ್ಯಂತ, ವಾಡಿಕೆಗಿಂತ ಶೇಕಡ 4 ರಷ್ಟು ಹೆಚ್ಚು ಮಳೆ; ಒಟ್ಟು 5 ಲಕ್ಷದ 20 ಸಾವಿರದ 663 ಹೆಕ್ಟರ್ ಪ್ರದೇಶದಲ್ಲಿ, ಬೆಳೆ ಹಾನಿ.

ಧಾರವಾಡ, ಕಲಬುರ್ಗಿ, ಸೇರಿದಂತೆ, ರಾಜ್ಯದ ಒಟ್ಟು 6 ಕಡೆಗಳಲ್ಲಿ, ಖಾಯಂ ಜನತಾ ನ್ಯಾಯಾಲಯ; ಈ ತಿಂಗಳ 13 ರಂದು, ಲೋಕ ಅದಾಲತ್.

ಸರಕು ಮತ್ತು ಸೇವಾ ತೆರಿಗೆ ಪರಿಷ್ಕರಣೆ; ಈ ತಿಂಗಳ 22 ರಿಂದ, ಹೊಸ ದರಗಳು, ಜಾರಿಗೆ.

ಉಪ ರಾಷ್ಟ್ರಪತಿ ಸ್ಥಾನಕ್ಕೆ ಇಂದು, ಚುನಾವಣೆ: ರಾಜ್ಯದ 40 ಸಂಸದರು ಸೇರಿ, ಒಟ್ಟು 781 ಸಂಸದರಿಂದ ಮತದಾನ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>